# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 1244/2023

| | | | |
|---|---|---|---|
| ಸಿಡಬ್ಲ್ಯೂ | 14 | ಪಿಡಬ್ಲ್ಯೂ | 10 |

ಸಾಕ್ಷಿದಾರರ ಹೆಸರು : ಗುರುರಾಜ ಟಿ

ತಂದೆಯ ಹೆಸರು : ತಿಪ್ಪೇಸ್ವಾಮಿ

ವಯಸ್ಸು : 35 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 07.02.2026

ಉದ್ಯೋಗ : ಪಿ ಎಸ್ ಐ

ವಾಸ ಸ್ಥಳ : ಕುಕನೂರು

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-

ಸದರಿ ಪ್ರಕರಣದ ಕಡತವನ್ನು ಚಾ ಸಾ 13 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ದಿನಾಂಕ 15.05.2023 ರಂದು ಹಲವಾಗಲು ಪೋಲೀಸ ಠಾಣೆ ಆವರಣದಲ್ಲಿ ಪಂಚರಾದ ಚಾ ಸಾ 4 ಮತ್ತು ಚಾ ಸಾ 5 ರವರ ಸಮಕ್ಷಮ ಮಧ್ಯಾಹ್ನ 12 ರಿಂದ 1 ಗಂಟೆಯವರೆಗೆ ವಾಹನ ಜಪ್ತು ಪಂಚನಾಮೆಯನ್ನು ಜರೂಗಿಸಿ ಸ್ಥಳದಲ್ಲಿ ಎರಡು ಛಾಯ ಚಿತ್ರವನ್ನು ತೆಗೆದಿರುತ್ತೇನೆ. ಆ ದಿನ ಸ್ಥಳದಲ್ಲಿ ಕೆ ಎ 35 ಎಸ್ 1160 ರ ವಾಹನವನ್ನು ಜಪ್ತುಪಡಿಸಿಕೊಂಡು ಪಿ ಎಫ್ ನಂಬರ 34/2023 ರಲ್ಲಿ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ ಪಿ 4 ಎಂದು ಗುರುತಿಸಲಾಗಿದ್ದು ಅದರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿ ಪಿ 4(ಡಿ) ಅಂತಾ ಗುರುತಿಸಲಾಯಿತು. ದಿನಾಂಕ 21.05.2023 ರಂದು ಚಾ ಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಧಿಕಾರಿಯಾದ ಚಾ ಸಾ 10 ರವರಿಂದ ಪಡೆದುಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿ ಪಿ 6 ಎಂದು, ಸಾಕ್ಷಿ ಸಹಿಯನ್ನು ನಿ ಪಿ 6(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ಚಾ ಸಾ 6 ಮತ್ತು 7 ರವರ ಹೇಳಿಕೆಯನ್ನು ದಿನಾಂಕ 04.07.2023 ರಂದು ಚಾ ಸಾ 8 ಮತ್ತು 9 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 16.05.2023 ರಂದು ಚಾ ಸಾ 11 ರವರಿಂದ ಕಲಂ 65 ಬಿ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. 65 ಬಿ ಪ್ರಮಾಣ ಪತ್ರವನ್ನು ನಿ ಪಿ 7 ಎಂದು, ಸಾಕ್ಷಿ ಸಹಿಯನ್ನು ನಿ ಪಿ 7(ಎ) ಎಂದು ಗುರುತಿಸಲಾಯಿತು. ದಿನಾಂಕ 20.05.2023 ರಂದು ಕೆ ಕೆ ಆರ್ ಟಿ ಸಿ ಹರಪನಹಳ್ಳಿ ಘಟಕದವರಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾ ಸಾ 1 ರವರ ಕರ್ತವ್ಯ

ಸಿ ಸಿ ನಂಬರ 1244/2023

| | | | |
|---|---|---|---|
| ಸಿಡಬ್ಲ್ಯೂ | 14 | ಪಿಡಬ್ಲ್ಯೂ | 10 |

ದೃಢಿಕರಣ ಪತ್ರ, ನೇಮಕಾತಿ ಪತ್ರ, ನೌಕರನ ವೇತನ ಪ್ರತಿ, ಮಾರ್ಗ ಮತ್ತು ದಾರಿಯ ಪ್ರತಿಗಳನ್ನು ಪಡೆದಿರುತ್ತೇನೆ. ಸದರಿ ದಾಖಲಾತಿಗಳು ನಿ ಪಿ 8 ರಿಂದ ನಿ ಪಿ 11 ಎಂದು ಗುರುತಿಸಲಾಯಿತು. ದಿನಾಂಕ 16.02.2023 ರಂದು 3 ನೇ ಆರೋಪಿತನಿಗೆ ಕಲಂ 41 ಎ ನೋಟೀಸನ್ನು ಜಾರಿ ಮಾಡಿ ಬಂಧನ ಕ್ರಮವನ್ನು ಅನುಸರಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ. ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ K.S.G. ವಕೀಲರಿಂದಃ-**

ನಾನು ಕೃತ್ಯ ಸ್ಥಳಕ್ಕೆ ಭೇಟಿ ಕೊಟ್ಟು ಸಾಕ್ಷಿದಾರರನ್ನು ವಿಚಾರಿಸಿದ್ದೇನೆ. ನಮ್ಮ ಸಿಬ್ಬಂದಿ ತಯಾರಿಸಿದ ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸದೇ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಸಿಬ್ಬಂದಿಯವರ ಒತ್ತಡದ ಮೇರೆಗೆ ಸುಳ್ಳು ಪರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಎಂ ಎಲ್ ಸಿ ಯ ವಾಸ್ತವಂಶ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಿರುತ್ತೇನೆ. ಪೋಲೀಸ ಠಾಣೆ ಯಲ್ಲಿ ಪಂಚನಾಮೆ ಮತ್ತು ಮಹಜರ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಕರಣದ ಮೇಲೆ ನನಗೆ ಮಾಹಿತಿ ಇಲ್ಲದಿದ್ದರೂ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರ್ಯಾದುದಾರರರಿಗೆ ಸಹಾಯ ಮಾಡಲು ಸುಳ್ಳು ಪ್ರಕರಣವನ್ನು ದಾಖಲಿಪಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.